ಸುತ್ತವೆ. ದೇಶ, ವಿದೇಶದ ಕಂಪೆನಿಗಳ ಕಚೇರಿಗಳು, ಅಂತರಾಷ್ಟ್ರೀಯ ಮಟ್ಟದ ಹೋಟೆಲುಗಳು ಈ ಕಟ್ಟಡಗಳಲ್ಲಿವೆ. ಕೆಲವು ಕಟ್ಟಡಗಳ ಮೇಲೆ ಹೆಲಿಕಾಪ್ಟರ್ ಇಳಿಯಲು ಹೆಲಿಪ್ಯಾಡೂ ಇವೆ.

ಕತಾರಿನ ಪಾರ್ಲಿಮೆಂಟ್ ಹೌಸ್ 'ಅಮೀರಿ ದೀವಾನ್', ಅರಬ್, ಪರ್ಷಿಯನ್ ಹಾಗೂ ಇಸ್ಲಾಮಿನ ಇತಿಹಾಸ ಬಿಂಬಿಸುವ ಮ್ಯೂಸಿಯಮ್ ಆಫ್ ಇಸ್ಲಾಮಿಕ್ ಆರ್ಟ್, ಪಾರ್ಕುಗಳು, ರೆಸ್ಟೋರೆಂಟ್‌ಗಳು, ಸಮುದ್ರದಲ್ಲಿ ಕೊರ್ನಿಶಿನ ಸುತ್ತ ಜನರನ್ನು 'ರೈಡ್' ಕೊಂಡುಹೋಗುವ ದೋಣಿಗಳು, ಸರಕುಗಳನ್ನು ಹೊತ್ತು ತರುವ ದೋಣಿಗಳು ಎಲ್ಲವೂ ಕೊರ್ನಿಶಿನ ಅಕ್ಕ ಪಕ್ಕದಲ್ಲಿಯೇ ಇದೆ. ವಿದೇಶಗಳಿಂದ ಹಡಗಿನಲ್ಲಿ ಬಂದ ವಸ್ತುಗಳು, ದೋಹ ಪೋರ್ಟ್ ಗೆ ಬಂದು ಅಲ್ಲಿಂದ ಚಿಕ್ಕ ಚಿಕ್ಕ ದೋಣಿಗಳಲ್ಲಿ ದೋಹಕ್ಕೆ ಬರುತ್ತವೆ.



ನಗರದ ಗಗನಚುಂಬಿ ಕಟ್ಟಡಗಳು

ಚಿತ್ತಾಕರ್ಷಕ ಆಧುನಿಕ ವಾಸ್ತುಶಿಲ್ಪಗಳೂ ಇಲ್ಲಿವೆ. ಚಿಪ್ಪಿನಿಂದ ನೀರು ಸುರಿಯುವ ದೊಡ್ಡ 'ಒಯಿಸ್ಟರ್' ಕಲಾಕೃತಿ ಕತಾರಿನ ಚಿನ್ಹೆಯಂತೆ ಯಾವತ್ತೂ ನೆನಪಿನಲ್ಲಿ ಉಳಿಯುತ್ತದೆ. ಕತಾರಿನ ಜನ ಒಂದು ಕಾಲಕ್ಕೆ ಜೀವನೋಪಾಯಕ್ಕಾಗಿ ಮುತ್ತು ಮತ್ತು ಮೀನುಗಳ ವ್ಯಾಪಾರ ಮಾಡುತ್ತಿದ್ದರಂತೆ. ಅದರ ದ್ಯೋತಕದಂತೆ ಈ ಕಲಾಕೃತಿ ಗಮನ ಸೆಳೆಯುತ್ತದೆ. ಸಂಜೆ ಇಲ್ಲಿ ವಾಕಿಂಗ್ ಹೊರಟರೆ, ಉದ್ಯೋಗ ಮತ್ತು ವ್ಯಾಪಾರದ ಬೆನ್ನು ಹತ್ತಿದ ಬಂದ ವಿಶ್ವದ ಹಲವು ದೇಶಗಳ ಜನರು ಎದುರಾಗುತ್ತಾರೆ. ಕೆಲವರು ತಮ್ಮದೇ ದೇಶದ ಉಡುಗೆ ತೊಡುಗೆಯನ್ನುಟ್ಟು ತಮ್ಮ ದೇಶದ ಸಂಸ್ಕೃತಿಯನ್ನು ಬಿಂಬಿಸುತ್ತಾರೆ.

ಇಲ್ಲಿ ಓಡಾಡುವವರಲ್ಲಿ ಭಾರತ, ಶ್ರೀಲಂಕಾ, ಪಾಕಿಸ್ತಾನ, ಬಾಂಗ್ಲಾದೇಶ, ಸುಡಾನ್ ದೇಶದವರೂ ಸೀರೆ ಉಡುತ್ತಾರೆ. ಆದರೆ ಸೀರೆ ಉಡುವ ರೀತಿ ಮಾತ್ರ ಬೇರೆ. ನೋಡಲು ಭಾರತೀಯರಿಗಿಂತ ಭಿನ್ನವಾಗಿರುತ್ತಾರೆ. ಕತಾರಿನಲ್ಲಿ ಹಲವು ದೇಶಗಳ ಜನರಿದ್ದಾರೆ. ಭಾರತೀಯರೇ ಅಧಿಕ. ಕನ್ನಡಿಗರ ಸಂಖ್ಯೆ 25 ಸಾವಿರ ಇರಬಹುದು. ತುಳು ಸಂಘ ಮತ್ತು ಕನ್ನಡ ಸಂಘಗಳು ಸಕ್ರಿಯವಾಗಿವೆ.

'ಕತರಿ'ಗಳೆಂದು ಕರೆಯಲ್ಪಡುವ ಕತಾರ್ ದೇಶದ ಗಂಡಸರು, ಬಹುತೇಕ ಅರಬರಂತೆ ಬಿಳಿ ನಿಲುವಂಗಿ ಮತ್ತು ಸಡಿಲ ಪ್ಯಾಂಟನ್ನು ಧರಿಸಿ, ತಲೆಗೆ ಬಿಳಿ ಅಥವಾ ಬಿಳಿ ಮತ್ತು ಕೆಂಪು ಚೌಕುಳಿಯ ಸ್ಕಾರ್ಫನ್ನು ಕಪ್ಪು ಹಗ್ಗದ ಸಹಾಯದಿಂದ ಕಟ್ಟಿಕೊಳ್ಳುತ್ತಾರೆ. ಹೆಂಗಸರು ಕಪ್ಪು ಬಣ್ಣದ ನಿಲುವಂಗಿ 'ಅಭಯ', ತಲೆಕೂದಲು ಮುಚ್ಚುವ 'ಶಯಲಾ' ಧರಿಸುತ್ತಾರೆ. ಈ ಉಡುಪು ಕತರಿಗಳ ಹೆಮ್ಮೆಯ ದ್ಯೋತಕ.

ಕತಾರಿನ ಜನರು ಕ್ರೀಡಾ ಪ್ರಿಯರು. ಫುಟ್‌ಬಾಲ್ ನೆಚ್ಚಿನ ಆಟ. ಅರಬ್ ಕುದುರೆಗಳ ಓಟ, ಒಂಟೆಗಳ ಓಟ, ಗಿಡುಗಗಳ ಹಾರಾಟ ಸ್ಪರ್ಧೆಗಳೇ ಇಲ್ಲಿನ ಸಾಂಪ್ರದಾಯಿಕ ಆಟಗಳು. ನೀರಿನಲ್ಲಿ ನಡೆಯುವ ವೈವಿಧ್ಯಮಯ ಕ್ರೀಡೆಗಳು ಕೊರ್ನಿಶನ ಪಕ್ಕದಲ್ಲೇ ಆಗಾಗ ನಡೆಯುತ್ತಿರುತ್ತವೆ. ಕತಾರ್ 2006ರಲ್ಲಿ 15ನೇ 'ಏಶ್ಯಾಡ್ ಗೇಮ್ಸ್'ಗೆ ಅತಿಥೇಯ ರಾಷ್ಟ್ರವಾಗಿತ್ತು, ವಾಕಿಂಗ್, ಸೈಕ್ಲಿಂಗ್ ಮುಂತಾದ ಕ್ರೀಡೆಗಳನ್ನೂ ಕೊರ್ನಿಶ್‌ನಲ್ಲೇ ನಡೆಸಲಾಗಿತ್ತು. ಆಗ ಎಲ್ಲವನ್ನೂ ಹತ್ತಿರದಿಂದ ನೋಡುವ ಭಾಗ್ಯವೂ ಸಿಕ್ಕಿತ್ತು.



ಕೊರ್ನೀಶ್‌ನ ಸುಂದರ ಪಾರ್ಕ್‌ನಲ್ಲಿ ಲೇಖಕಿ

ಇಲ್ಲಿ ಪ್ರತಿ ವರ್ಷ ಫೆಬ್ರುವರಿ ತಿಂಗಳಿನ ಎರಡನೆಯ ಮಂಗಳವಾರ ಕ್ರೀಡಾ ದಿನವಾಗಿ ಆಚರಿಸುತ್ತಿದ್ದು, ಕೊರ್ನಿಶನ ಉದ್ದಕ್ಕೂ ಹಲವು ಕ್ರೀಡೆಗಳನ್ನು ಮಕ್ಕಳು, ದೊಡ್ಡವರಿಗಾಗಿ ಆಯೋಜಿಸುತ್ತಾರೆ. 2022ರ 'ವರ್ಲ್ಡ್ ಫುಟ್‌ಬಾಲ್ ಕಪ್'ಗೆ ಕತಾರ್ ಅತಿಥೇಯ ರಾಷ್ಟ್ರವಾಗಿದೆ. ಇಂತಹ ಪಂದ್ಯಗಳನ್ನು